ಓ.ಎಸ್. ನಂ. 120/2017 ಡಿ.ಡಬ್ಲ್ಯೂ- 2

**ಸಾಕ್ಷಿಯನ್ನು ದಿನಾಂಕ 23.11.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಟಿ.ಎನ್.ಎನ್ ವಕೀಲರ ಪರ ಶ್ರೀಮತಿ ಕೆ.ಎಂ.ಎನ್ ವಕೀಲರಿಂದಃ**

ನಾನು ಡಿ.ಇಡಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಗೃಹಿಣಿಯಾಗಿರುತ್ತೇನೆ. ನನ್ನ ತಾತನ ಹೆಸರು ವೆಂಕಟಪ್ಪ ಅಲಿಯಾಸ್ ಕರಿಯಪ್ಪ ಆಗಿರುತ್ತದೆ. ನನ್ನ ತಾತನಿಗೆ 4 ಜನ ಮಕ್ಕಳಿರುತ್ತಾರೆ. ಅವರ ಹೆಸರು ಕರಿಯಪ್ಪ, ಬಸಪ್ಪ, ನಂಜಪ್ಪ ಮತ್ತು ದೇವಮ್ಮ ಆಗಿರುತ್ತದೆ. ಸದರಿ ದೇವಮ್ಮ ರವರನ್ನು ದೆಗ್ಗಲಹುಂಡಿ ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿರುತ್ತದೆ. ಅವರ ಮದುವೆಯಾಗಿ 50 ವರ್ಷವಾಗಿರಬಹುದು. ದಾವಆಸ್ತಿಗಳು ನನ್ನ ತಾತ ವೆಂಕಟಪ್ಪ ಅಲಿಯಾಸ್ ಕರಿಯಪ್ಪ ರವರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಾತ ತೀರಿಕೊಂಡು ಅಂದಾಜು 55-60 ವರ್ಷವಾಗಿರುತ್ತದೆ. ಮೇಲೆ ಹೇಳಿದ ದೇವಮ್ಮರವರ ಮದುವೆಯಾದಾಗ ನನ್ನ ತಾತ ಬದುಕಿದ್ದರು. ನನ್ನ ಅಜ್ಜಿಯ ಹೆಸರು ಚಿಕ್ಕತಾಯಮ್ಮ ಆಗಿದ್ದು ಅವರು ತೀರಿಕೊಂಡು 15 ರಿಂದ 17 ವರ್ಷ ಆಗಿರುತ್ತದೆ. ನನ್ನ ದೊಡ್ಡಪ್ಪನಾದ ಕರಿಯಪ್ಪ ತೀರಿಕೊಂಡು 15 ವರ್ಷವಾಗಿರುತ್ತದೆ. ನನ್ನ ತಾತ ತೀರಿಕೊಂಡ ನಂತರ ಅವರ ಎಲ್ಲ ಮಕ್ಕಳಿಗೂ ದಾವಆಸ್ತಿಯಲ್ಲಿ ಪಾಲು ಇರುತ್ತದೆ ಎಂದರೆ ಸರಿ. ನನ್ನ ದೊಡ್ಡಪ್ಪ ಕರಿಯಪ್ಪನವರು ತೀರಿಕೊಂಡ ನಂತರ ಅವರ ಮಕ್ಕಳು ಮತ್ತು ನನ್ನ ತಾತ ಹಾಗೂ ಅವರ ಇತರ ಮಕ್ಕಳು ಒಟ್ಟಿಗೆ ವಾಸವಾಗಿದ್ದರು ಎಂದರೆ ಸರಿಯಲ್ಲ. ಅವರೆಲ್ಲರೂ ದಾವಆಸ್ತಿಯ ಜಂಟಿ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ನಂಜಪ್ಪರವರು 2001 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ದೊಡ್ಡಪ್ಪನಾದ ಕರಿಯಪ್ಪ ತೀರಿಕೊಂಡ ನಂತರ ಮನೆಗೆ ಹಿರಿಯ ಮಗ ಬಸಪ್ಪ ಆಗಿದ್ದರು ಎಂದರೆ ಸರಿಯಲ್ಲ. ಸದರಿ ಕರಿಯಪ್ಪ ತೀರಿಕೊಂಡ ನಂತರ ಮನೆಯ ವ್ಯವಹಾರವನ್ನು ಬಸಪ್ಪ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಕರಿಯಪ್ಪ ತೀರಿಕೊಂಡಾಗ ಅವರ ಮಕ್ಕಳು ಚಿಕ್ಕವರಾಗಿದ್ದರು ಎಂದರೆ ಸರಿಯಲ್ಲ. ಕರಿಯಪ್ಪ ತೀರಿಕೊಂಡ ನಂತರ ಅವರ ಸಹೋದರ ಸಹೋದರಿಯರ ನಡುವೆ ದಾವಆಸ್ತಿಗಳಿಗೆ ಸಂಬಂಧಪಟ್ಟಂತೆ ಯಾವುದೇ ವಿಭಾಗವಾಗಿರುವುದಿಲ್ಲ ಎಂದರೆ ಸರಿಯಲ್ಲ. 1962 ರಲ್ಲಿ ನನ್ನ ತಾತ ಬದುಕಿದ್ದಾಗಲೇ ಅವರ ಎಲ್ಲ ಮಕ್ಕಳಿಗೂ ವಿಭಾಗ ಮಾಡಿಕೊಟ್ಟಿದ್ದರು. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಜಮೀನಿನ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಕರಿಯಪ್ಪ ನವರು ತೀರಿಕೊಂಡ ನಂತರ ಲಿಖಿತ ಅಥವಾ ಮೌಖಿಕವಾಗಿ ಭಾಗವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ದೊಡ್ಡಪ್ಪ ಚನ್ನಾಗಿರುತ್ತೇವೆ ಎಂದರೆ ಸಾಕ್ಷಿದಾರರು ಅವರವರ ವ್ಯವಹಾರವನ್ನು ಅವರು ಮಾಡುತ್ತಿದ್ದು ಮಾತನಾಡಿಸುತ್ತೇವೆ ಎನ್ನುವರು. ಬಸಪ್ಪನವರು ನಮ್ಮ ಕುಟುಂಬದ ಎಲ್ಲ ವ್ಯವಹಾರವನ್ನು ಮಾಡುತ್ತಿದ್ದು ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.